ಭಾನುವಾರದಂದು ಸಂಜೆ ಅಮರನಾಥನ ಫ್ಲಾಟ್‌ನ ಕಾಲಿಂಗ್ ಬೆಲ್ ಬಾರಿಸಿದ ನಂತರ ಬಂದವನು ಸಾಧಾರಣ ವ್ಯಕ್ತಿಯಾಗಿರಲಿಲ್ಲ. ಅವನೊಬ್ಬ ಬ್ಲಾಕ್ ಮೇಲರ್ ಆಗಿದ್ದ.

'ನನ್ನ ಹೆಸರು ಮೈಕೇಲ್ ಅಂತ. ಪೂರ್ಣ ಹೆಸರು ಮೈಕೇಲ್ ಡಿಸೋಜಾ. ನಿಮ್ಮನ್ನು ಭೇಟಿಯಾಗಲು ಬಯಸುತ್ತೇನೆ'.

ಆಗ ಅಮರನಾಥ ತನ್ನ ಸಾಧಾರಣ ಉಡುಪಿನಲ್ಲಿದ್ದ– ಸ್ಲೇಟ್ ಬಣ್ಣದ ಸಫಾರಿ ಸೂಟು, ಕೊಲ್ಹಾಪುರಿ ಚಪ್ಪಲಿಗಳು, ಮಣಿಕಟ್ಟಿನಲ್ಲಿ ಕಾಂಟಿನೆಂಟಲ್ ವಾಚ್, ಬ್ರೌನ್ ಟಿಂಟ್‌ನ ರೇಬಾನ್ ಸನ್ ಗ್ಲಾಸ್ ಧರಿಸಿದ್ದ ಮೈಕೇಲ್ ಡಿಸೋಜಾನನ್ನು ಒಮ್ಮೆ ನೋಡಿ ಅಮರನಾಥ ಹೇಳಿದ. 'ಕಮ್–ಇನ್'.

ಡ್ರಾಯಿಂಗ್ ರೂಮಿನ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಕೆಂಪು ಬಣ್ಣದ ಕಾರ್ಪೆಟ್, ಗೋಡೆಗಳ ಮೇಲೆ ವಾಲ್ ಪೇಪರ್, ದುಬಾರಿ ಸೋಫಾ–ಸೆಟ್, ಕೋಣೆಯ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಶೋಕೇಸ್, ಏರ್–ಕಂಡೀಶನರ್. ಸೋಫಾದಲ್ಲಿ ಬೋಳು ತಲೆಯ, ಕಾಲು ಚಟ್ಟಿ ಧರಿಸಿದ ಸ್ವಾಮಿಗಳೊಬ್ಬರು ಕೂತಿದ್ದರು. ಕೊರಳಿನಲ್ಲಿ ರುದ್ರಾಕ್ಷಿ ಮಾಲೆಯಿತ್ತು. ಅಮರನಾಥ ಪರಿಚಯಿಸಿದ:

'ಸ್ವಾಮಿ ಬೋಧಾನಂದರು. ಇವರು ಮೈಕೇಲ್ ಡಿಕೋಸ್ಟಾ'

'ಡಿಸೋಜಾ' ಅವನು ಸರಿಪಡಿಸಿದ.

'ಸಾರಿ, ಮೈಕೇಲ್ ಡಿಸೋಜಾ. ನೀವು ಐದು ನಿಮಿಷ ನನಗಾಗಿ ಕಾಯಲು ಸಾಧ್ಯವೇ? ಪ್ಲೀಸ್!'

ಅಮರನಾಥ ತೋರಿಸಿದ ಸೋಫಾದಲ್ಲಿ ಮೈಕೇಲ್ ಕೂತ. ಸ್ವಾಮಿಗಳು ಅಮರನಾಥನೊಂದಿಗೆ ತಮ್ಮ ಮಾತುಕತೆಯನ್ನು ಮುಂದುವರೆಸಿದರು.

ಈ ವಾರದ ಭಾಷಣದ ವಿಷಯ ಧಾರ್ಮಿಕ ಮೌಲ್ಯಗಳ ವಿನಾಶ. ಮನುಷ್ಯ ಕಾಮುಕನಾಗುತ್ತಿದ್ದಾನೆ. ಧಾರ್ಮಿಕ ವಿಷಯಗಳನ್ನು ಮರೆಯುತ್ತಿದ್ದಾನೆ. ಮನುಷ್ಯನ ಧಾರ್ಮಿಕ ಇಚ್ಛೆಯನ್ನು ಜಾಗೃತಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯ. ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ........

ಮೈಕೇಲ್ ಡಿಸೋಜಾ ಈಗ ಸಮ್ಮಿಲನವನ್ನು ಅನುಭವಿಸಿದ. ವಾಹ್! ಒಳ್ಳೇ ಮಾಲು ಸಿಕ್ಕಿದೆ. ಅವನು ಸುತ್ತಮುತ್ತ ದೃಷ್ಟಿ ಹರಿಸಿದ. ಒಂದು ಸಂಕೀರ್ಣ ಮೂಲೆಯಲ್ಲಿ ಒಳ ಬಾಗಿಲು. ಸಂಕೀರ್ಣ ಮೂಲೆಯ ಎರಡೂ ಕಡೆ ಬೆಡ್‌ರೂಮಿನ ಬಾಗಿಲುಗಳು. ಒಂದೇ ಬೆಡ್‌ರೂಮಿನ ಎರಡು ಬಾಗಿಲುಗಳಿರಬಹುದು. ಆ ಕೋಣೆಯಲ್ಲಿಯೂ ಕಾರ್ಪೆಟ್ ಮತ್ತು ವಾಲ್‌ಪೇಪರ್‌ಗಳು. ಕಡೆಪಕ್ಷ ಹತ್ತು ಸಾವಿರ ಕೇಳಬೇಕು. ಇಷ್ಟೆಲ್ಲಾ ಅನುಕೂಲಗಳೊಂದಿಗೆ ಬಾಂದ್ರಾದಲ್ಲಿ ಜೀವಿಸುವವನು ಸಾಮಾನ್ಯ ಮನುಷ್ಯನಾಗಿರಲು ಸಾಧ್ಯವಿಲ್ಲ.

ಸುವಾಸಿತ ಗ್ಲಾಸ್‌ನಲ್ಲಿ ಥಮ್ಸ್ ಅಪ್ ತಂದು ಅವನೆದುರಿಗಿದ್ದ ಟಿಪಾಯಿಯ ಮೇಲಿಟ್ಟ. ಅವನು ಕುಡಿಯಲಾರಂಭಿಸಿದ. ಆಗಲೇ ಸ್ವಾಮಿಗಳು ಹೊರಡಲನುವಾದರು. ಸ್ವಾಮಿಗಳು ಹೊರಟುಹೋದ ಮೇಲೆ ಬಾಗಿಲನ್ನು ಮುಚ್ಚಿ ಅಮರನಾಥ ಡಿಸೋಜಾನೆದುರು ಕೂತ.

'ವಾಟ್ ಕೆನ್ ಐ ಡೂ ಫಾರ್ ಯೂ?'

ಮೈಕೇಲ್ ಡಿಸೋಜಾ ಗ್ಲಾಸನ್ನು ಟಿಪಾಯಿಯ ಮೇಲಿಟ್ಟು ತನ್ನ ಮುಖವನ್ನು ಆದಷ್ಟು ಕಠೋರ ಮಾಡಿಕೊಳ್ಳಲು ಪ್ರಯತ್ನಿಸಿದ. ತಾನು ಏನು ಹೇಳಲು ಹೋಗುತ್ತಿರುವೆನೋ ಅದರ ಪ್ರಭಾವ ತನ್ನ ಎದುರಾಳಿಯ ಮೇಲೆ ಏನಾಗಬಹುದೆಂದು ಯೋಚಿಸಿದ. ಮುಖ ಮತ್ತಷ್ಟು ಗಡುಸಾಗುವುದು. ಅವನು ಭಯಕ್ಕೊಳಗಾಗುವನು. ಆಗ ಅವನು ತಾನು ಪಾರಾಗುವ ಬಗ್ಗೆ ಮಾತನಾಡುವನು. ಅಂಥ ಪರಿಸ್ಥಿತಿಯಲ್ಲಿ ಅವನನ್ನು ಉಳಿಸಲು ನಾನು ಮುಂದಾಗುವೆ.

'ಶುಕ್ರವಾರ ನೀವು ಮಲಬಾರ್ ಹಿಲ್‌ನ ಹಿಲ್‌ಫೈರ್ ಹೋಟೆಲ್‌ನಲ್ಲಿದ್ದಿರಿ. ಯಾಕೆ ಅಂತ ನಾನು ತಿಳಿಯಲು ಬಯಸುವೆ'.

'ಐ ಬೆಗ್ ಯುವರ್ ಪಾರ್ಡನ್' ಅಮರನಾಥ ಹೇಳಿದ. 'ನನಗರ್ಥವಾಗಲಿಲ್ಲ'

ಇವನು ಒಳ್ಳೆಯ ನಟ ಎಂದು ಮೈಕೇಲ್ ಯೋಚಿಸಿದ. ಇದ್ದಕ್ಕಿದ್ದಂತೆಯೇ ಇವನನ್ನು ಶಿಥಿಲಗೊಳಿಸುವುದು ಒಳ್ಳೆಯದು. ಅವನು ತನ್ನ ಸ್ವರವನ್ನು ಕಠೋರ ಮಾಡಿಕೊಂಡ.

'ಶುಕ್ರವಾರ ರಾತ್ರಿ ಹಿಲ್‌ಫೈರ್‌ನಲ್ಲಿ ನೀವೇನು ಮಾಡಿದಿರಿ ಅಂತ ನನಗ್ಗೊತ್ತು'

ಅಮರನಾಥನ ಮುಖದಲ್ಲಿ ಎಂಥಾ ಪ್ರತಿಕ್ರಿಯೆಯಾಗಿದೆ ಎಂದು ಮೈಕೇಲ್ ತಿಳಿಯಬಯಸಿದ. ಕ್ಷಣಕಾಲ ತಡೆದು ಅಮರನಾಥ ಹೇಳಿದ:

'ನಿಜ ಹೇಳಬೇಕೆಂದರೆ, ನನಗಿನ್ನೂ ನಿಮ್ಮ ಮಾತು ಅರ್ಥವಾಗಲಿಲ್ಲ. ಕಳೆದ ಶುಕ್ರವಾರ ನಾನು ಹಿಲ್‌ಫೈರ್‌ನಲ್ಲಿದ್ದೆ. ಸ್ನಾನೇಯವರ ಪಾರ್ಟಿಯಿತ್ತು. ಅವರ ಫಿಲ್ಮ್‌ನ ಸಿಲ್ವರ್ ಜುಬಿಲಿಯಿತ್ತು. ನನಗಿದು ನೆನಪಿದೆ. ಅಷ್ಟೆ. ಅದರಲ್ಲೇನು ವಿಶೇಷ?'

'ಮಿಸ್ಟರ್ ನೀವು ಅಜ್ಞಾನಿಯಂತೆ ವರ್ತಿಸಬೇಡಿ. ಕೋಣೆ 204 ರಲ್ಲಿ ನೀವು ಯಾರ ಜೊತೆ ರಾತ್ರಿಯನ್ನು ಕಳೆದಿರಿ ಅಂತ ನನಗ್ಗೊತ್ತು'

'ಓಹೋ, ಹೀಗೋ' ಅಮರನಾಥ ಆರಾಮವಾಗಿ ಕೂತ. 'ನೀವು ಒಬ್ಬರು ಬ್ಲಾಕ್‌ಮೇಲರ್. ನನಗೆ ಹೆದರಿಸಿ ಹಣ ಕಿತ್ತುಕೊಳ್ಳಲು ಬಂದಿದ್ದೀರಿ'

'ಯೂ ಆರ್ ಕ್ವಾಯಿಟ್ ರೈಟ್' ಎಂದು ಮೈಕೇಲ್.

'ನೀವೇ ಹೊರಟು ಹೋಗ್ತೀರೋ ಅಥವಾ ನಾನೇ ನಿಮಗೆ ದಾರಿ ತೋರಿಸಬೇಕೋ?




ಅಮರನಾಥ ಶಾಂತನಾದ.

ಓರ್ವ ಸಾಮಾನ್ಯ ಮನುಷ್ಯ ಈ ಹೇಳಿಕೆಯಲ್ಲಿ ಅಡಗಿದ ಬೆದರಿಕೆಯನ್ನು ಅರ್ಥ ಮಾಡಿಕೊಳ್ಳಲಿಲ್ಲ. ಆದರೆ ಮೈಕೇಲ್ ತನ್ನ ಯೋಚನೆಗಳಲ್ಲಿಯೇ ಮುಳುಗಿದ್ದ. ಹೀಗಾಗಿ ಅವನಿಗೆ ಅರ್ಥವಾಗಲಿಲ್ಲ. ಇಷ್ಟೇ ಅಲ್ಲ, ಇಂಥ ಸಮಯದಲ್ಲಿ ಬೇಟೆಗೆ ಬಲಿಯಾದ ವ್ಯಕ್ತಿ ಸಾಮಾನ್ಯವಾಗಿ ವಿರೋಧವನ್ನು ವ್ಯಕ್ತಪಡಿಸುತ್ತಾನೆ ಅಥವಾ ತಲೆತಗ್ಗಿಸುತ್ತಾನೆ. ಇದು ಸಾಮಾನ್ಯ ಎಂದೂ ಯೋಚಿಸುತ್ತಿದ್ದ. ಒಂದೇ ಉದ್ದೇಶದಿಂದ ಮುಂದುವರೆಯುವವರಿಗೆ ಯಾವುದೇ ಸಮಸ್ಯೆಯಿರುವುದಿಲ್ಲ. ಮೈಕೇಲ್ ಡಿಸೋಜಾ ಎಂಬ ಬ್ಲಾಕ್ ಮೇಲರ್‌ನ ಪರಿಸ್ಥಿತಿಯೂ ಇದೇ ಆಗಿತ್ತು. ಎಲ್ಲಾ ಸರಿಯಾಗಿ ನಡೆಯುತ್ತಿದೆಯೆಂದು ಅವನಿಗನ್ನಿಸಿದಾಗ ಅವನು ತನ್ನ ಸ್ವರವನ್ನು ಮೃದು ಮಾಡಿಕೊಂಡ.

'ನನಗೆ ನಿಮ್ಮ ಕಷ್ಟ ಅರ್ಥವಾಗುತ್ತೆ. ಈ ವಿಷಯವನ್ನು ನಾನು ಯಾರಿಗೂ ಹೇಳುವವನಲ್ಲ. ನಾನೊಬ್ಬ ಒಳ್ಳೆಯ ಮನುಷ್ಯ'

'ಗುಡ್ ಲಾರ್ಡ್!' ಅಮರನಾಥನ ಸ್ವರದಲ್ಲಿ ಶಾಂತತೆಯಿತ್ತು.

'ನೋಡಿ, ಅಮರ್‌ನಾಥ್, ನೋಡಿ. ನಾವು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬಲ್ಲೆವು'.

ವಿಷಯದ ಆಳದ ಅರಿವು ಬಹುಶಃ ಅಮರನಾಥನಿಗೆ ಇನ್ನೂ ಆಗಿಲ್ಲವೆಂದು ಅಕಸ್ಮಾತ್ ಮೈಕೇಲನಿಗೆ ಅನ್ನಿಸಿತು. ಅವನು ಜೇಬಿನಿಂದ ಒಂದು ಕಪ್ಪು–ಬಿಳುಪು ಫೋಟೋವನ್ನು ಹೊರತೆಗೆದು, ಅದನ್ನು ಅಮರನಾಥನ ಎದುರಿಗಿಟ್ಟ. ಅಮರನಾಥ ಅದನ್ನು ನೋಡಿದ. ಪರಸ್ಪರ ಅಪ್ಪಿಕೊಂಡ ಎರಡು ನಗ್ನ ದೇಹಗಳು. ಫೋಟೋದಲ್ಲಿರುವ ಗಂಡು ತಾನೇ ಎಂಬುದನ್ನು ಅಮರನಾಥ ತಿಳಿದ.

'ಇದರಲ್ಲಿ ಒಂದು ಮಾರ್ಗವನ್ನು ಹುಡುಕೋಣ. ಅವಸರದಲ್ಲಿ ಯಾವ ಕೆಲಸವೂ ಆಗಲ್ಲ ಅಂತ ನಾನು ಹೇಳಿದ್ದ' ಮೈಕೇಲ್ ಕೂಲಾಗಿ ನಕ್ಕ.

ಅಮರನಾಥ ಫೋಟೋವನ್ನು ಕೈಯಲ್ಲಿ ಹಿಡಿದು ನೋಡಿದ. 'ಹೌದು, ಫೋಟೋ ಚೆನ್ನಾಗಿದೆ. ಯಾರು ತೆಗೆದದ್ದು?'

'ನಾನೇ. ಅದೆಷ್ಟು ಕಷ್ಟಪಟ್ಟು ಈ ಫೋಟೋ ತೆಗೆದೆ ಅಂತ ನಿಮಗೆ ಗೊತ್ತಾ? ಇಬ್ಬರ ಮುಖವೂ ಚೆನ್ನಾಗಿ ಕಾಣಿಸ್ತಿದೆ'

'ಇದು ಹೇಗಾಯ್ತು?'

'ನಾನು ಗ್ಯಾಲರಿಯಲ್ಲಿ ಅಡಗಿದ್ದ'

ಒಂದು ಫ್ಲ್ಯಾಶ್ ಕಂಡಿತ್ತು. ಆದರೆ ಆ ಬಗ್ಗೆ ಗಮನ ಕೊಟ್ಟಿರಲಿಲ್ಲ. ಅರ್ಧ ಬಾಟ್ಲ್ ವ್ಹಿಸ್ಕಿಯೂ ಹೊಟ್ಟೆಯನ್ನು ಸೇರಿತ್ತು ಎಂದು ಅಮರನಾಥ ಯೋಚಿಸಿದ. ಈಗ ಅವನು ಒಮ್ಮೆಲೆ ಪ್ರಶ್ನಿಸಿದ. 'ಈ ಫೋಟೋವನ್ನು ನಾನಿಟ್ಟುಕೊಳ್ಳಬಹುದೇ?'

'ಓಹೋ, ಇಟ್ಟುಕೊಳ್ಳಿ. ನನ್ನ ಹತ್ರ ನೆಗೆಟಿವ್ ಇದೆ' ಮತ್ತೆ ಮೈಕೇಲ್‌ನ ಕೊಳಕು ನಗು.

'ಇದಕ್ಕೆ ನೀವೆಷ್ಟು ತೆಗೆದುಕೊಳ್ತೀರಿ?' ಅಮರನಾಥ ಪ್ರಶ್ನಿಸಿದ.

'ಇಪ್ಪತ್ತೈದು'

'ಇಪ್ಪತ್ತೈದು ಸಾವಿರ?' ಅಮರನಾಥ ಗಟ್ಟಿಯಾಗಿ ಪ್ರಶ್ನಿಸಿದ.

'ಹೌದು. ಇದರಲ್ಲಿ ಭಾಗವಹಿಸಿದವರ ಸ್ಟೇಟಸ್ ನೋಡಿದರೆ ಕಡಿಮೆಯೇ ಅಂತ ಅನ್ನಿಸುತ್ತೆ. ಆದರೆ

NEXT PAGE.....

ನಾನೊಬ್ಬ ಒಳ್ಳೆಯ ಮನುಷ್ಯ. ನನ್ನ ಗುರಿ ಯಾರ ರಕ್ತವನ್ನೂ ಹೀರುವುದಲ್ಲ. ಈಗ ನೀವು ಪೂರಾ ಹಣವನ್ನು ಕೊಡಲು ಸಾಧ್ಯವಾಗದಿದ್ರೆ ಉಳಿದ ಹಣಕ್ಕೆ ಬೇರರ್ ಚೆಕ್ ನಡೆಯುತ್ತೆ'.

'ನೀವು ನನ್ನ ಅವಮಾನ ಮಾಡ್ತಿದ್ದೀರ. ನನ್ನ ಹತ್ರ ಇಪ್ಪತ್ತೈದು ಸಾವಿರ ರೂಪಾಯಿಗಳಿಲ್ಲ ಅಂತ ನೀವು ಹೇಗೆ ಊಹಿಸಿದಿರಿ?' ಅಮರನಾಥ. ಡಿಸೋಜಾನನ್ನು ನೋಡಿದ.

'ಐ ಯಾಮ್ ಸಾರಿ. ಐ ಡಿಡಂಟ್ ಮೀನ್ ಇಟ್' ಡಿಸೋಜಾ ಕ್ಷಮೆಯಾಚಿಸಿದ. ಖುಷಿಯಿಂದಾಗಿ ಅವನ ಗಂಟಲಿನಿಂದ ಮಾತೇ ಬರುತ್ತಿರಲಿಲ್ಲ. ಇಷ್ಟೊಂದು ಸುಲಭವಾಗಿ ಕೆಲಸ ಪೂರ್ಣವಾಗುತ್ತೆ ಅಂತ ಅವನು ಯೋಚಿಸಿರಲೂ ಇಲ್ಲ. ಕಡೇ ಪಕ್ಷ ಹದಿನೈದು ಸಾವಿರಕ್ಕೆ ಕುದುರಬಹುದೆಂದು ಅವನ ಅನಿಸಿಕೆಯಾಗಿತ್ತು. ಈಗ ಅವನು ಮತ್ತೂ ಆರಾಮಾಗಿ ಕೂತ. ಅವನು ಜೇಬಿನಿಂದ ಪನಾಮಾ ಸಿಗರೇಟನ್ನು ಹೊರತೆಗೆಯುವಷ್ಟರಲ್ಲಿ, ಆಗಲೇ ಅಮರನಾಥ ಸ್ಟೇಟ್ ಎಕ್ಸ್‌ಪ್ರೆಸ್‌ನ ಪ್ಯಾಕೆಟ್ ತೋರಿಸಿದ.

'ಈ ಒಂದು ಫಾರಿನ್ ಸಿಗರೇಟ್ ತೆಗೆದುಕೊಳ್ಳಿ'

'ಸರಿ. ಥ್ಯಾಂಕ್ ಯೂ'

ಮೈಕೇಲ್ ಸಿಗರೇಟನ್ನು ತುಟಿಗಳ ಮಧ್ಯೆ ಇಟ್ಟುಕೊಂಡ. ಅಮರನಾಥ ಸುವರ್ಣ ವರ್ಣದ ಲೈಟರಿನಿಂದ ಸಿಗರೇಟನ್ನು ಹೊತ್ತಿಸಿದ.

'ಥ್ಯಾಂಕ್ಸ್'

ಅಮರನಾಥನೂ ಸಿಗರೇಟ್ ಹೊತ್ತಿಸಿದ.

'ಬಿಜಿನೆಸ್ ಹೇಗಿದೆ.....?'

'ಎಂಥಾ ಬಿಜಿನೆಸ್?' ಮೈಕೇಲ್‌ಗೆ ಆಶ್ಚರ್ಯವಾಯಿತು.

'.......ಅದೇ ನಿಮ್ಮ ಈ ಬಿಜಿನೆಸ್'

'ನಡೀತಿದೆ. ನನ್ನ ರೇಡಿಯೋ ರಿಪೇರಿ ಅಂಗಡಿಯಿದೆ'

ಅಮರನಾಥ ಯೋಚಿಸುತ್ತಿದ್ದ. ಮೈಕೇಲ್ ಏನೂ ನಿರಾಕರಿಸದೆ ಕೂತಿದ್ದ. ಈಗ ಏನಾದರೂ ಮಾತನಾಡುವುದು ಪರಿಸ್ಥಿತಿಯನ್ನು ಕಲುಷಿತಗೊಳಿಸಬಹುದು. ಸಿಗರೇಟಿನ ಒಂದು ದಮ್ಮನ್ನು ಮತ್ತೆಳೆದು. ಬೂದಿಯನ್ನು ಆ್ಯಶ್-ಟ್ರೇನಲ್ಲಿ ಹಾಕುತ್ತಾ ಅಮರನಾಥ ಹೇಳಿದ. 'ಬ್ಲ್ಯಾಕ್ ಮೇಲರ್ ಎರಡು ವಿಧಾನಗಳಿಂದ ಬ್ಬರನ್ನು ಎದುರಿಸಬೇಕಾಗುತ್ತೆ ಅಂತ ಅನ್ನಿಸುತ್ತದೆ. ಮೊದಲನೆಯದು. ಅವನನ್ನು ಸಾಯಿಸುವುದು. ಎರಡನೆಯದು, ಅವನು ಕೇಳಿದಷ್ಟು ಹಣವನ್ನು ಕೊಟ್ಟುಬಿಡುವುದು. ಸಾಯಿಸುವುದರಲ್ಲಿ ನನಗೇನೂ ಆಸಕ್ತಿಯಿಲ್ಲ. ಒಬ್ಬ ವ್ಯಕ್ತಿಯನ್ನು ಸಾಯಿಸಿದ ನಂತರ ಹೆಚ್ಚು ದಿನದವರೆಗೆ ಕಾನೂನಿನ ಕಣ್ಣು ತಪ್ಪಿಸಿ ಬದುಕುವುದು ಸಾಧ್ಯವಿಲ್ಲ. ಗಲ್ಲಿಗೇರುವುದು ನನಗೆ ಹಿಡಿಸುವುದಿಲ್ಲ. ಈಗ ಉಳಿದಿರೋದು ಎರಡನೇ ಮಾರ್ಗ- ಹಣವನ್ನು ಕೊಟ್ಟುಬಿಡುವುದು. ನೀವು ನಾಳೆ ಬರೋದಕ್ಕೆ ಆಗಲ್ವಾ?'

'ಖಂಡಿತ ಸಾರ್' ಮೈಕೇಲ್ ಮುಗುಳ್ನಕ್ಕ.

'ಸರಿ. ನಾಳೆ ಬೆಳಗ್ಗೆ ಭೇಟಿಯಾಗೋಣ. ಯಾವುದಾದರೂ ಮೂರನೆಯ ಮಾರ್ಗ ಉಳಿದಿದೆಯೋ ಇಲ್ವೋ ಅಂತ ಸ್ವಲ್ಪ ಯೋಚ್ನೆ ಮಾಡ್ತೀನಿ' ಹಿಗೆಂದು ಜೇಬಿನಿಂದ ಫೋಟೋ ತೆಗೆದು ಅದನ್ನೇ ನೋಡುತ್ತಾ ಮತ್ತೆ ಹೇಳಿದ. 'ನೀವು ಒಳ್ಳೇ ಫೋಟೋಗ್ರಾಫರ್'

'ಥ್ಯಾಂಕ್ ಯೂ ಸಾರ್'

ಮಾರನೆಯ ದಿನ ಬೆಳಗ್ಗೆ ಅಮರನಾಥನ ಮನೆಯ ಬಾಗಿಲೆದುರು ನಿಂತು. ಕಾಲಿಂಗ್ ಬೆಲ್ ಒತ್ತಿ ಮೈಕೇಲ್ ಡಿಸೋಜಾ ನಿರೀಕ್ಷೆಯಲ್ಲಿದ್ದ. ಫುಲ್ ಸ್ಲೀವ್ ಶರ್ಟ್. ಸುವರ್ಣ ವರ್ಣದ ಕಫ್‌ಲಿಂಗ್ಸ್. ಉಳಿದ ಉಡುಪುಗಳೊಂದಿಗೆ ಮ್ಯಾಚ್ ಆಗದ. ಕಡು ಬಂದು ಟೈ. ಶೂಸ್‌ಗಳಿಗೆ ಪಾಲೀಶ್. ನಿನ್ನೆ ಅವನ ಉಡುಪು ಸರಿಯಿರಲಿಲ್ಲ. ಹೀಗಾಗಿ ಅಮರನಾಥನ ಡ್ರಾಯಿಂಗ್ ರೂಮಿನಲ್ಲಿ ಕೂರುವಾಗ ಅವನಿಗೆ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್‌ನ ಅನುಭವವಾಗಿತ್ತು. ಉತ್ತಮ ಉಡುಗೆಗಳೇ ಆತ್ಮವಿಶ್ವಾಸವುಂಟು ಮಾಡುತ್ತವೆ. ಒಂದು ವೇಳೆ ಅಮರನಾಥ ಹಣವನ್ನು ಕೊಡುವ ಬಗ್ಗೆ ಮಾತನ್ನು ಪ್ರಾರಂಭಿಸಿದ್ದರೆ, ಅದನ್ನು ವಿರೋಧಿಸಲು ಆತ್ಮವಿಶ್ವಾಸದ ಆವಶ್ಯಕತೆಯಿದೆ.

ಆದರೆ ಬಾಗಿಲು ತೆರೆಯುತ್ತಲೇ ಎದುರಿಗಿದ್ದ ಅಮರನಾಥನನ್ನು ಕಂಡು ಅವನಿಗೆ ನಿರಾಸೆಯಾಯಿತು. ಅಮರನಾಥ ಪೈಜಾಮ ಧರಿಸಿದ್ದು ಮೇಲೆ ಶರ್ಟ್ ಇರಲಿಲ್ಲ. ಕತ್ತಿನಲ್ಲಿ ಬಂಗಾರದ ಸರವಿತ್ತು. ಕ್ಷೌರ ಮಾಡಿಕೊಂಡಿರಲಿಲ್ಲ. ತಲೆಯನ್ನೂ ಬಾಚಿಕೊಂಡಿರಲಿಲ್ಲ.

'ಹಲೋ ಮಿಸ್ಟರ್ ಡಿಕೋಸ್ಟಾ. ಯೂ ಆರ್ ಅರ್ಲಿ, ಕಮ್ ಇನ್'

'ಡಿಸೋಜಾ' ಅವನು ತಿದ್ದಿದ.

'ಮೇಕ್ಸ್ ನೋ ಡಿಫರೆನ್ಸ್. ನೀವೇನು ತೆಗೆದುಕೊಳ್ತೀರ? ಚಹಾ. ಕಾಫಿ. ಎನಿಥಿಂಗ್ ಹಾಟ್?'

'ಥ್ಯಾಂಕ್ ಯೂ..... ನಾನು ಸ್ವಲ್ಪ ಅವಸರದಲ್ಲಿದ್ದೇನೆ' ಮೈಕೇಲ್ ಆತುರ ತೋರಿದ. ಅಮರನಾಥ ತನ್ನನ್ನೂ ಮಾತಿನಲ್ಲಿ ಸಿಗಿಸಲು ನೋಡುತ್ತಿದ್ದಾನೆ. ಆದರೆ ನಾನು ಸಿಕ್ಕಿಹಾಕಿಕೊಳ್ಳುವಂತಹವನಲ್ಲ......

'ಸರಿ. ನಾವು ಐದು ನಿಮಿಷ ಇಲ್ಲಿ ಕೂತು ಮಾತನಾಡೋಣ. ಆಮೇಲೆ ಹೊರಗೆ ಹೋಗೋಣ. ಸಿಗರೇಟ್ ಬೇಕಾ?'

'ಯೆಸ್. ಥ್ಯಾಂಕ್ ಯೂ'

'ನಿಮ್ಮ ಉದ್ದೇಶವೇನು?'

ಮೈಕೇಲ್ ಆರಾಮಾಗಿ ಕೂತು. ಕತ್ತಿಗೆ ಅಂಟಿಕೊಂಡಿದ್ದ ಟೈಯನ್ನು ಸರಿಪಡಿಸಿಕೊಂಡ.

'ನಾನು ಹೇಳುತ್ತೇನೆ' ಅಮರನಾಥ ಮುಂದುವರೆಸಿದ. 'ಒಂದು ವೇಳೆ ನಾನು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡದಿದ್ದರೆ ನೀವು ನನ್ನ ಸ್ನೇಹಿತರಿಗೆ ಮತ್ತು ಬಂಧುಗಳಿಗೆ ಆ ಹಿಲ್‌ಫ್ಲವರ್ ವಿಷಯವನ್ನು ಹೇಳ್ತೀರ. ಸಾಕ್ಷಿ ರೂಪದಲ್ಲಿ ಆ ಫೋಟೋವನ್ನೂ ತೋರಿಸ್ತೀರ? ಹೌದು ತಾನೇ?'

'ಹೌದು' ಮೈಕೇಲ್ ತನ್ನ ಮುಖವನ್ನು ಗಡಸು ಮಾಡಿಕೊಳ್ಳಲು ತುಂಬಾ ಪ್ರಯತ್ನಿಸಿದ.

'ಈ ಇಪ್ಪತ್ತೈದು ಸಾವಿರ. ನಾನು ಹೇಳಿದರೆ, ಹದಿನೈದು ಸಾವಿರಕ್ಕೂ ಇಳಿಯುತ್ತೆ' ಮೈಕೇಲ್ ತಲೆಯಾಡಿಸಿದ.

'ಹೌ ಟೆರಿಬಲ್. ನಾನು ಮತ್ತು ನೀತಾ ಬೆತ್ತಲೆಯಾಗಿ ಮಲಗಿದ್ದೇವೆ. ಜನರೆಲ್ಲಾ ನಮ್ಮನ್ನೇ ನೋಡ್ತಿದ್ದಾರೆ' ಅಮರನಾಥ. ಮೈಕೇಲನನ್ನೇ ಗಮನಿಸಿದ. ಕಡೆಗೆ ತಲೆಯ ಮೇಲೆ ಕೈಹೊತ್ತು ಕೂತ. ಮೈಕೇಲ್ ಖುಷಿಯಿಂದ ಟೈಯನ್ನು ಸರಿಪಡಿಸಿಕೊಂಡ.

'ತಮ್ಮಾ' ಅಮರನಾಥ ಈಗ ಎದ್ದುನಿಂತು ಸೇವಕನನ್ನು ಕರೆದ. ನಿನ್ನೆ ಬಂದಿದ್ದ ಸೇವಕನೇ ಪ್ರತ್ಯಕ್ಷನಾದ.

'ಶರ್ಟ್'

ಸೇವಕ ತಂದುಕೊಟ್ಟ ಶರ್ಟ್‌ನ್ನು ಧರಿಸಿ ಅಮರನಾಥ ಹೇಳಿದ. 'ನಡೀರಿ......'

'ಎಲ್ಲಿಗೆ?' ಅಮರನಾಥ ಹೆದರಿದ. 'ನೋ ಫೌಲ್ ಪ್ಲೇ ಮಿಸ್ಟರ್ ಅಮರನಾಥ್'

'ಇಲ್ಲ - ಇಲ್ಲ. ಇದೇ ಮನೆಗೆ......'

ಕೋಟ್‌ಕೇಸ್‌ನ ಮೇಲಿದ್ದ ಕವರನ್ನು ಜೇಬಿಗೆ ಹಾಕಿಕೊಂಡು ಅಮರನಾಥ ಬಾಗಿಲನ್ನು ತೆರೆದ.

ಲಿಫ್ಟ್ ಎದುರು ಒಂದು ಕ್ಷಣ ನಿಂತ ಮೇಲೆ ಅಮರನಾಥ ಹೇಳಿದ. 'ನಾವು ಹತ್ತಿ ಹೋಗೋಣ'.

ಎರಡನೆಯ ಅಂತಸ್ತಿನ ಎಂಟನೆಯ ನಂಬರಿನ ಫ್ಲ್ಯಾಟಿನ ಕಾಲಿಂಗ್ ಬೆಲ್ ಒತ್ತಿ ಅಮರನಾಥ ನಿರೀಕ್ಷೆಯಲ್ಲಿ ನಿಂತ. ಓರ್ವ ದಢೂತಿ ಹೆಂಗಸು ಬಾಗಿಲನ್ನು ತೆರೆದಳು.

'ತರುಣ್ ಮನೆಯಲ್ಲಿದ್ದಾರಾ?'

'ಹೂಂ' ಹೆಂಗಸು ಬಾಗಿಲನ್ನು ಒಳಗೆ ಎಳೆದುಕೊಂಡಳು. ಮೈಕೇಲ್‌ನೊಂದಿಗೆ ಅಮರನಾಥ ಕೋಣೆಯನ್ನು ಪ್ರವೇಶಿಸಿದ. ತರುಣ್ ಒಂದು ಮಂಚದ ಮೇಲೆ ಮಲಗಿದ್ದ. ಪೈಜಾಮ ಧರಿಸಿದ್ದ ಅವನ ತೊಡೆಗಳು ವಿಶಾಲವಾಗಿದ್ದವು. ಅಮರನಾಥನನ್ನು ನೋಡಿದೊಡನೆಯೇ ಅವನು ನಕ್ಕ.

'ಹಾಂ.....ಹಾಂ...... ಅರೇ ಅಮರನಾಥ್ ಸಾಹೇಬ್ರು...... ಇಷ್ಟು ಬೆಳ್ಗಂ ಬೆಳಗ್ಗೆ......'

'ಇವರು ಮೈಕೇಲ್ ಡಿಸೋಜಾ ಅಂತ. ಯಾಮ್ ಐ ರೈಟ್?' ಅವನು ಮೈಕೇಲ್‌ನೆಡೆಗೆ ಹೊರಳಿದ. ಮೈಕೇಲ್ ತಲೆಯಾಡಿಸಿದ.

'ಇವರೊಬ್ಬರು ಪ್ರೊಫೆಶನಲ್ ಬ್ಲ್ಯಾಕ್‌ಮೇಲರ್. ಈಗ ನನಗೆ ಬ್ಲ್ಯಾಕ್‌ಮೇಲ್ ಮಾಡಲು ಬಂದಿದ್ದಾರೆ. ಹಿಲ್ ಫ್ಲವರ್ ಹೋಟೆಲ್‌ನ 204ನೇ ನಂಬರ್‌ನ ಕೋಣೆಯಲ್ಲಿ ನಾನು ಮತ್ತು ನೀತಾ ಏನೋ ಮಾಡುವುದನ್ನು ಇವರು ನೋಡಿದ್ದಾನೆ. ಆ ದೃಶ್ಯವನ್ನು ಕ್ಯಾಮರಾದಲ್ಲಿ ಸೆರೆಹಿಡಿದಿದ್ದಾರೆ ಇನ್‌ಡೀಸೆಂಟಲಿ. ಮಿಸ್ಟರ್ ಮೈಕೇಲ್ ಇಸ್ ಎ ವೆರಿ ಗುಡ್ ಫೋಟೋಗ್ರಾಫರ್'

ಮೈಕೇಲ್ ಬೆವರಿನಿಂದ ಒದ್ದೆಯಾದ.

'ಮಿಸ್ಟರ್ ಮೈಕೇಲ್. ನೀವೇನಾದರೂ ಹೇಳಬೇಕೆಂದಿದ್ದರೆ ಹೇಳಬಹುದು. ಹೆಚ್ಚು ಹೇಳಬೇಕೆಂದಿದ್ದರೆ......'

ಮೈಕೇಲ್ ಶಿಥಿಲಗೊಳ್ಳುತ್ತಿದ್ದ ಅವನು ಮಂದ ಧ್ವನಿಯಲ್ಲಿ ಹೇಳಿದ. 'ಮಿಸ್ಟರ್ ಅಮರನಾಥ್. ನಾನು ನಿಮ್ಮ ಹತ್ರ ಏನೋ ಹೇಳಬೇಕಾಗಿದೆ'.

ತರುಣ್‌ರವರ ಹೆಂಡತಿ ಎರಡು ಗ್ಲಾಸ್ ನೀರನ್ನು ತಂದಿಟ್ಟಳು. ಮೈಕೇಲ್ ಒಂದೇ ಉಸುರಿಗೆ ನೀರನ್ನು ಕುಡಿದ. ಅವನ ಗಂಟಲು ಒಣಗಿತ್ತು.

'ನೀವು ತರುಣ್ ಎದುರು ಹೇಳಲು ಬಯಸುವುದಿಲ್ಲ? ತರುಣ್ ಹಾಲೀಜ ನನ್ನ ಪ್ರಿಯ ಮಿತ್ರ'

'ನಾವು ಹೊರಡೋಣ' ಎಂದ ಮೈಕೇಲ್.

ಹೊರಬಂದಾಗ ಮೈಕೇಲ್ ಹೇಳಿದ. 'ಮಿಸ್ಟರ್ ಅಮರನಾಥ್. ನಾನು ಹೇಳಿದ ಹಣದ ಬಗ್ಗೆ ನಾವು ಮತ್ತೆ ಯೋಚಿಸೋಣ. ನಾವು ಇಪ್ಪತ್ತು ಸಾವಿರಕ್ಕೆ ಸೆಟಲ್ ಮಾಡಿಕೊಳ್ಳೋಣ. ನಾನು ನಿಮಗೆ ತೊಂದ್ರೆ ಕೊಡಲು ಇಷ್ಟಪಡಲ್ಲ'.

'ಹಣ ಕಡಿಮೆ ಮಾಡುವ ಅಗತ್ಯವಿಲ್ಲ. ನಾನು ಆ ಬಗ್ಗೆ ಏನೂ ಹೇಳೂ ಇಲ್ಲ. ಕಡಿಮೆ ಮಾಡೋದು ಅಂದರೆ ನೀವು ನಿಮ್ಮ ಹಣವನ್ನು ಕಡಿಮೆ ಮಾಡ್ತಿದ್ದೀರ. ನೀವು ಇನ್ನೊಂದು ಅಂತಸ್ತನ್ನು ಹತ್ತಲು ಸಾಧ್ಯವೇ?'

ಮೂರನೆಯ ಅಂತಸ್ತಿನ ಹನ್ನೆರಡನೆಯ ಫ್ಲ್ಯಾಟ್‌ನ ಕಾಲಿಂಗ್ ಬೆಲ್ ಒತ್ತಿ ಅಮರನಾಥ ನಿರೀಕ್ಷಿಸಿದ. ಸುಂದರಿಯೊಬ್ಬಳು ಬಾಗಿಲನ್ನು ತೆರೆದಳು. ಅಮರನಾಥ ಒಳಬರುತ್ತಲೇ ಅವಳು ಅವನನ್ನು ಅಪ್ಪಿಕೊಂಡಳು.

next page.....

'ಓಹ್ ಡಾರ್ಲಿಂಗ್. ಶೇವ್ ಮಾಡಿಕೊಳ್ಳದೆ ನೀವು ಹೊರಗೆ ಹೋರಡಬೇಡಿ ಅಂತ ನಾನು ನಿಮಗೆ ಅದೆಷ್ಟು ಸಲ ಹೇಳಿದ್ದೆ. ನನ್ನ ಗಲ್ಲಕ್ಕೆ ಚುಚ್ಚುತ್ತೆ' ಆಗಲೇ ಅವಳಿಗೆ ಹಿಂದೆ ನಿಂತಿದ್ದ ವ್ಯಕ್ತಿ ಕಾಣಿಸಿದ. ಅವಳು ಅಮರನಾಥನಿಂದ ದೂರ ಸರಿದು ನಿಂತಳು.

'ಇವರು ಮೈಕೇಲ್ ಡಿಸೋಜಾ ಅಂತ. ಓರ್ವ ಪ್ರೊಫೆಶನಲ್ ಬ್ಲ್ಯಾಕ್‌ಮೇಲರ್. ಇವಳು ನನ್ನ ಫ್ಯಾನ್ಸಿ, ಮಿಸ್ ಕಪಾಡಿಯಾ' ಅಮರನಾಥ ಅವಳನ್ನು ಮೈಕೇಲ್‌ಗೆ ಪರಿಚಯಿಸಿದ.

**'ಓಹ್ ಡಾರ್ಲಿಂಗ್.** ನೀನು ಇಂಥ 'ಕ್ರೀಪ್' ವ್ಯಕ್ತಿಗಳನ್ನು ಇಲ್ಲಿಗೇಕೆ ಕರೆದುಕೊಂಡು ಬರ್‍ತೀಯಾ?'

'ಕ್ರೀಪ್ 'ಇಂಡೀಡ್' ಮೈಕೇಲ್ ಮುಗುಳ್ನಕ್ಕ.

'ಇವರು ನಿನ್ನ ಹತ್ರ ಏನೋ ಹೇಳಲು ಬಯಸುತ್ತಾರೆ'

'ಬನ್ನಿ'

'ಮಿಸ್ಟರ್ ಅಮರನಾಥ್. ಬನ್ನಿ. ನಾನು ನಿಮ್ಮ ಹತ್ರ ಏನೋ ಹೇಳುವುದಿದೆ'

ಅಮರನಾಥ ಒಳಗೆ ಹೋಗಿ ಕೂತಿದ್ದ.

'ಕಳೆದವಾರ ಹಿಲ್‌ಫ್ಲೈರ್‌ನ 204ನೇ ನಂಬರಿನ ರೂಮಿನಲ್ಲಿ ನಾನು ನೀತಾಳೊಂದಿಗಿದ್ದೆ. ಇವರು ಫೋಟೋ ಹೊಡೆದುಕೊಂಡಿದ್ದಾರೆ. ಆ ಫೋಟೋ ತೋರಿಸ್ತಾರೆ'.

'ಡಾರ್ಲಿಂಗ್. ಯೂ ಆರ್ ವೆರಿ ನಾಟಿ. ಭವಿಷ್ಯದಲ್ಲಿಯೂ ನೀನು ಹೀಗೆ ಮಾಡಿದರೆ ನನಗೆ ಸಿಟ್ಟು ಬರುತ್ತೆ' ಅವಳು ಅಮರನಾಥನ ಬಳಿಗೆ ಬಂದು ಅವನ ಕತ್ತನ್ನು ಬಳಸಿ ಕೂತಳು.

'ನೀನು ಈ ಕ್ರೀಪನ್ನು ಕಳಿಸಿಬಿಡು. ಮಮ್ಮಿ ಮತ್ತು ಡ್ಯಾಡಿ ಹೊರಗೆ ಹೋಗಿದ್ದಾರೆ. ವಿ ವಿಲ್ ಹ್ಯಾವ್ ಎ ನೈಸ್ ಟೈಮ್'

ಮೈಕೇಲ್ ಬೆವರಿನಿಂದ ಒದ್ದೆಯಾಗುತ್ತಿದ್ದ. ಅವನು ಟೈಯನ್ನು ಸಡಿಲಿಸಿಕೊಂಡು, ಶರ್ಟ್‌ನ ಗುಂಡಿಯನ್ನು ಬಿಚ್ಚಿದ.

'ನಾಟ್ ನೌ. ಡಿಯರ್' ಅಮರನಾಥ ಅವಳಿಂದ ಬಿಡಿಸಿಕೊಳ್ಳುತ್ತಾ ಹೇಳಿದ. 'ನಾನೊಂದು ಕಡೆಗೆ ಹೋಗಬೇಕು'

ಮೈಕೇಲ್ ಹೊರಗೆ ಬಂದಿದ್ದ. ಹಿಂದಿನಿಂದ ಕೇಳಿಸುತ್ತಿದ್ದ ಮಾತುಗಳನ್ನು ಕೇಳಬಾರದೆಂದು ಕಿವಿಗಳಿಗೆ ಬೆರಳುಗಳನ್ನಿಟ್ಟುಕೊಂಡಿದ್ದ. ಲಿಫ್ಟ್‌ನಿಂದ ಕೆಳಗಿಳಿಯುವಾಗ ಮೈಕೇಲ್ ಹೇಳಿದ. 'ಮಿಸ್ಟರ್ ಅಮರನಾಥ್. ನಾವು ಹಣವನ್ನು ಮತ್ತು ಕಡಿಮೆ ಮಾಡಿಕೊಳ್ಳೋಣ. ನಾನು ಹದಿನೈದು ಸಾವಿರವನ್ನೇ ತೆಗೆದುಕೊಳ್ಳುವ ಬಗ್ಗೆ ಯೋಚಿಸುತ್ತಿದ್ದೆ. ನಾನು ತುಂಬಾ ಅರ್ಜೆಂಟ್‌ನಲ್ಲಿದ್ದೇನೆ. ಹೀಗಾಗಿ ಹತ್ತಕ್ಕೇ......'

'ಡೋಂಟ್ ಲೂಸ್ ಹಾರ್ಟ್. ನಾವು ಮತ್ತೊಂದು ಜಾಗಕ್ಕೆ ಹೋಗಬೇಕು' ಅಮರನಾಥ ಕೆಳಗಿಳಿದು ಬಂದ. ಅಲ್ಲಿ ಅವನ ಸೇವಕ ಕಾರನ್ನು ತೊಳೆಯುತ್ತಿದ್ದ. ಕಾರಿನಲ್ಲಿ ಅಮರನಾಥ ಕೂತು ಮೈಕೇಲ್‌ಗೆ ಒಳಗೆ ಬರುವಂತೆ ಆಹ್ವಾನಿಸಿ ಕಾರನ್ನು ಸ್ಟಾರ್ಟ್ ಮಾಡಿದ.

'ಮಿಸ್ಟರ್ ಅಮರನಾಥ್. ನಾವು ಇನ್ನೂ ಸ್ವಲ್ಪ ಹೊತ್ತು ಮಾತನಾಡಬಹುದು'

'ಇಲ್ಲೇ ಹತ್ತಿರವಿದೆ– ನಾಲ್ಕು ಕಿಲೋಮೀಟರ್ ದೂರ. ಅಷ್ಟೇ'

ಪಿಲೆ ಪಾರಲೆಯಲ್ಲಿ ಒಂದು ಬಂಗ್ಲೆಯೆದುರು ಕಾರು ನಿಂತಿತು. ಅಮರನಾಥ ಹೊರಬಂದ.

'ಬನ್ನಿ'

ಮೈಕೇಲ್ ಶರ್ಟ್‌ನ ಬಟನ್ ಸರಿಪಡಿಸಿಕೊಂಡ. ಟೈಯನ್ನು ಸರಿಪಡಿಸಿಕೊಂಡ. ಅವನು ಹೊರಬಂದಾಗ ಸಾಕಷ್ಟು ವ್ಯಗ್ರನಾಗಿದ್ದ. ಬದುಕಿನಲ್ಲಿ ಇಂಥಾ ವಿಲಾಸದಿಂದಿರುವ ಸ್ಥಳವನ್ನು ಜಾಗವನ್ನು ಅವನು ನೋಡಿರಲೇ ಇಲ್ಲ. ಬೆಳಗ್ಗಿನ ಘಟನೆಗಳನ್ನು ನೋಡಿದಾಗ ಇದು ಕೊನೆಯ ಆಘಾತವೂ ಆಗಬಹುದು.

'ಮಿಸ್ಟರ್ ಅಮರನಾಥ್, ನಾವು ಇನ್ನೂ ಸ್ವಲ್ಪ ಮಾತನಾಡಬಹುದಲ್ಲ? ಹತ್ತು ಸಾವಿರಕ್ಕೆ ಬದಲಾಗಿ ನಾವು ಐದು ಸಾವಿರಕ್ಕೇ ಸೆಟಲ್ ಮಾಡಿಕೊಳ್ಳೋಣ. ಕೇವಲ ಐದು ಸಾವಿರ'.

ಆದರೆ ಅಮರನಾಥ ಮಾತನಾಡಲಿಲ್ಲ. ಅವನು ಬರುವುದನ್ನು ಕಂಡು ನೌಕರರು ತಲೆ ತಗ್ಗಿಸಿ ಅಭಿನಂದಿಸಿದರು. ಮೈಕೇಲ್ ಅವನನ್ನು ಹಿಂಬಾಲಿಸಿದ. ಅವರು ಒಂದು ವಾತಾನುಕೂಲ ಕೋಣೆಯನ್ನು ಪ್ರವೇಶಿಸಿದರು. ಅಲ್ಲಿ ಕಾರ್ಪೆಟ್ ಹಾಸಲಾಗಿತ್ತು. ಗೋಡೆಯ ಮೇಲೆ ವಾಲ್ ಪೇಪರ್. ಫ್ರೆಶ್ ಪರ್‌ಫ್ಯೂಮಿನ ಸುವಾಸನೆ. ರಿವಾಲ್ವಿಂಗ್ ಚೇರ್‌ನಲ್ಲಿ ನಡುವಯಸ್ಸಿನ ವ್ಯಕ್ತಿಯೊಬ್ಬ ಕೂತಿದ್ದ. ದಢೂತಿ ದೇಹದ ಅವರು ಗೋಧಿ ಬಣ್ಣದವರಾಗಿದ್ದು ಬೊಕ್ಕತಲೆಯನ್ನು ಹೊಂದಿದ್ದ.

'ಕೂತ್ಕೋ' ಆ ವ್ಯಕ್ತಿ ಫೈಲ್ ಮುಚ್ಚಿ ಹೇಳಿದ.

'ಮಿಸ್ಟರ್ ಮೈಕೇಲ್ .....' ಅಮರನಾಥ ಮೈಕೇಲನನ್ನು ಪರಿಚಯಿಸಿದ.

'ಮಿಸ್ಟರ್ ಅಮರನಾಥ್ ....' ಮೈಕೇಲ್ ಮಂದ ಸ್ವರದಲ್ಲಿ ಹೇಳಿದ ನಾವು ಮತ್ತೊಮ್ಮೆ ಡಿಸ್ಕಸ್ ಮಾಡೋಣ ಎಂಡ್ ಫಾರ್ ಹೆವನ್ ಸೇಕ್. ಡೋಂಟ್ ಇಂಟ್ರಡ್ಯೂಸ್ ಮಿ ಆ್ಯಸ್ ಎ ಬ್ಲ್ಯಾಕ್‌ಮೇಲರ್'.

'ದಿಸ್ ಈಸ್ ಮಿಸ್ಟರ್ ಮೈಕೇಲ್ ಡಿಸೋಜಾ. ಇವರು ತಮ್ಮನ್ನು ಬ್ಲ್ಯಾಕ್‌ಮೇಲರ್ ರೂಪದಲ್ಲಿ ಪರಿಚಯಿಸಿಕೊಳ್ಳಲು ಇಷ್ಟಪಡಲಿಲ್ಲ. ಇವರು ತುಂಬಾ ವಿನಯಶೀಲರು. ಮತ್ತೆ ಡಿಸೋಜಾ ಇವರು ಸಾಹು ಅಂತ. ಫಿಲ್ಮ್ ಪ್ರೊಡ್ಯೂಸರ್. ನೀವು ಯಾರ ಫೋಟೋ ತೆಗೆದಿದ್ದೀರೋ ಅವರು ಇವರ ಹೆಂಡತಿ ನೀತಾ ಸಾಹು'

'ಫೋಟೋ ..... ಎಂಥಾ ಫೋಟೋ?' ಸಾಹೂಯವರು ಆಶ್ಚರ್ಯವನ್ನು ವ್ಯಕ್ತಪಡಿಸಿದರು.

'ಹೌದು ...... ಹೌದು ..... ಫೋಟೋ' ಅಮರನಾಥ ಮುಂದುವರೆಸಿದ 'ಕಳೆದ ಶುಕ್ರವಾರದಂದು ಹಿಲ್‌ಫ್ಲೈರ್‌ನ 204ನೇ ರೂಮಿನಲ್ಲಿ ನೀತಾಳಿಗೆ ನಾನು ಕೆಲವು ಅಗತ್ಯ ವಿಷಯಗಳನ್ನು ಹೇಳುತ್ತಿದ್ದೆ'

'ಅಗತ್ಯ ವಿಷಯಗಳು ..... ಹಾ ..... ಹಾ ..... ಹಾ ..... ಹಾ' ಸಾಹು ಗಟ್ಟಿಯಾಗಿ ನಕ್ಕರು' ರಾತ್ರಿ ವೇಳೆ ..... ಹಿಲ್‌ಫ್ಲೈರ್‌ನ 204ನೇ ರೂಮಿನಲ್ಲಿ ...... ನೀತಾಳೊಂದಿಗೆ ಅಗತ್ಯ ವಿಷಯಗಳು ..... ಹಾ ..... ಹಾ ಮತ್ತೇನಾಯ್ತು?

'ಇವರು ಗ್ಯಾಲರಿಯಲ್ಲಿ ಅಡಗಿ ಕೂತು ನಮ್ಮ ಫೋಟೋವನ್ನು ತೆಗೆದಿದ್ದಾರೆ'

'ಫೋಟೋ? ಅದು ನಿನ್ನ ಹತ್ರ ಇದೆಯಾ?'

ಅಮರನಾಥ ತನ್ನ ಜೇಬಿನಿಂದ ಕವರ್ ಹೊರತೆಗೆದು ಅದನ್ನು ಸಾಹೂಯವರಿಗೆ ಕೊಟ್ಟ. ಕವರ್ ಒಳಗಿನಿಂದ ಸಾಹೂಯವರು ಫೋಟೋವನ್ನು ಹೊರತೆಗೆದರು.

'ಬ್ಯೂಟಿಫುಲ್! ರಿಯಲಿ ಬ್ಯೂಟಿ ಫುಲ್! ನನಗೆ ಇಂಥದ್ದೇ ಒಂದು ಫೋಟೋ ಬೇಕಾಗಿತ್ತು. ಈಗ ನನಗೊಂದು ಆಯುಧ ಸಿಕ್ಕಿದಂತಾಯಿತು. ಮಿಸ್ಟರ್ ಅಮರನಾಥ್. ನಾನು ಈ ಫೋಟೋವನ್ನು ನನ್ನ ಬಳಿ ಇಟ್ಟುಕೊಳ್ಳಬಹುದೇ?'

'ಖುಷಿಯಿಂದ ಇಟ್ಟುಕೊಳ್ಳಿ.'

'ದಟ್ ಬಿಚ್. ತುಂಬಾ ವರ್ಷಗಳಿಂದ ಅವಳು ನನಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಳು. ಅವಳ ಹತ್ರ ಒಂದು ಫೋಟೋವಿದೆ. ಅದರಲ್ಲಿ ನನ್ನ ಜೊತೆ ಒಬ್ಬಳು ಎಕ್ಸ್‌ಟ್ರಾ ನಟಿಯಿದ್ದಾಳೆ. ಹೀಗಾಗಿ ಇದುವರೆಗೆ ಅವಳಿಗೆ ಒಂದು ಲಕ್ಷಕ್ಕಿಂತ ಹೆಚ್ಚು ಹಣವನ್ನು ಕೊಟ್ಟು ಬಿಟ್ಟಿರುವೆ. ಐ ವಿಲ್ ಟೀಚ್ ದಟ್ ಬಿಚ್ ಎ ಲೆಸೆನ್'

ಮೈಕೆಲ್ ನಿಸ್ತೇಜವಾಗಿ ಕೂತುಬಿಟ್ಟ. ಅಚೇತ ನಾವಸ್ಥೆಯಲ್ಲಿ ಅವನು ಬಂದು ಕಾರಿನಲ್ಲಿ ಕೂತ. ಬಾಂದ್ರಾ ಸ್ಟೇಷನ್ ಸಮೀಪಿಸಿದಾಗ ಅಮರನಾಥ ಕೇಳಿದ. 'ನೀವಿಲ್ಲಿ ಇಳಿಯುತ್ತೀರ?'

ಮೈಕೇಲ್ ಆಶ್ಚರ್ಯಗೊಂಡ.

'ಸರಿ. ನಾನಿಲ್ಲೇ ಇಳಿಯುತ್ತೇನೆ' ಮೈಕೆಲ್‌ಗೆ ಒಮ್ಮೆಲೆ ನೆನಪಾಯಿತು – ಜೇಬಿನಲ್ಲಿ ಬಿಡಿಗಾಸೂ ಇಲ್ಲ. ಕೋಲಬಾಕ್ಕೆ ಬೇರೆ ಹೋಗಬೇಕಾಗಿದೆ.

'ನೀವು ನನಗೆ ಎರಡು ರೂಪಾಯಿಯನ್ನು ಕೊಡ್ತೀರ? ಬಸ್ ಟಿಕೇಟಿಗೆ'

'ಐ ಯಾಮ್ ಸಾರಿ ಮೈಕೇಲ್. ನೀವು ಒಂದು ಹೊಸ ಲೈನ್ ಹುಡುಕಲು ಪ್ರಾರಂಭಿಸಿ – ಇದೇ ಒಳ್ಳೇದು – ಭಿಕ್ಷೆ ಬೇಡಿ'

ಮೈಕೇಲ್ ಕಾರಿನಿಂದ ಕೆಳಗಿಳಿದಿದ್ದ. ತೀಕ್ಷ್ಣ ಬಿಸಿಲಿನಲ್ಲಿ ಅಮರನಾಥನ ಕಾರು ಹೋಗುವುದನ್ನು ನೋಡುತ್ತಾ ನಿಂತ. ಈ ಕಪಟಾಚಾರದ ಬಗ್ಗೆ ಯೋಚಿಸಿದಾಗ ಕಣ್ಣೀರು ಉಕ್ಕಿ ಬಂದಿತು. ಈ ಜಗತ್ತಿನಲ್ಲಿ ಓರ್ವ ಪ್ರಾಮಾಣಿಕ ಬ್ಲ್ಯಾಕ್‌ಮೇಲರ್ ಸಹ ಬದುಕುವುದು ಕಷ್ಟವಾಗಿದೆ.

BACK TO MAIN PAGE